ಬರೆದರು. ಅವನ್ನೆಲ್ಲ ಸಾಮಾನ್ಯವಾಗಿ ಕರ್ನಾಟಕ ಸಂಗೀತದ ಧಾಟಿಯಲ್ಲಿಯೇ ಹಾಡುವುದು ವಾಡಿಕೆ. ಈ ಪ್ರದರ್ಶನದಲ್ಲಿ ನಾನು ಪಚ್ಚೆವೇಷ ಅಂದರೆ ಫ್ರಾನ್ಸ್‌ನ ದೊರೆಯ ಪಾತ್ರ ಮಾಡಿದ್ದೆ. ಕಾರ್ಡಿಲಿಯ ಆಗಿ ಆನೆಟ್ಟ್ ಪಾತ್ರ ನಿರ್ವಹಿಸಿದರೆ ಗುರುಗಳಾದ ಪದ್ಮನಾಭನ್ ನಾಯರ್ ಅವರು ಲಿಯರ್‌ನ ವೇಷ ನಿರ್ವಹಿಸಿದ್ದರು. ಮುಂಬೈಯಲ್ಲಿ ಮೊದಲು ಪ್ರದರ್ಶನಗೊಂಡ ಈ ಪ್ರಸಂಗ ಯುರೋಪ್‌ನ ವಿವಿಧೆಡೆ, 44 ವೇದಿಕೆಗಳಲ್ಲಿ ಪ್ರದರ್ಶನಗೊಂಡು ಜನರ ಗಮನ ಸೆಳೆದಿತ್ತು. ಆನೆಟ್ಟ್ ಲಿಡೇ ಕಂಪೆನಿ (ಕೇಳಿ ಕಂಪೆನಿ) ಇದರ ನಿರ್ಮಾಣದ ಹೊಣೆ ವಹಿಸಿಕೊಂಡಿತ್ತು. ಒಂದೇ ಪ್ರದರ್ಶನ ನೆನಪಿನಲ್ಲಿದೆ ಎಂದು ಹೇಳಿದರೆ ಸುಳ್ಳಾದೀತು.

◆ **ಯಶಸ್ಸಿನ ಉತ್ತುಂಗವನ್ನು ಕಂಡವರು ನೀವು. ಆ ಸಂದರ್ಭದ ಒಡನಾಟ, ಪಾತ್ರನಿರ್ವಹಣೆಯ ನೆನಪುಗಳನ್ನು ಹಂಚಿಕೊಳ್ಳುವಿರಾ ?**

'ಇದು ನನ್ನ ಯಶಸ್ಸಿನ ಸಂದರ್ಭ' ಎಂದೇನೂ ಮನಸ್ಸಿಗೆ ಬರುವುದಿಲ್ಲ. ಆದರೆ ಬದುಕಿನ ನಿರ್ವಹಣೆಗಾಗಿ ದೀರ್ಘ ಹಾದಿ ಸವೆಸಿದ್ದೇನೆ. ಬಂದ ದಿನಗಳನ್ನು ಬಂದಹಾಗೆಯೇ ಎದುರಿಸುತ್ತಾ ಸಾಗುವುದಾಗಿತ್ತು. ಆದರೆ ನಿರಂತರ ಓಡಾಟದ ಪರಿಣಾಮವೋ, ಭಾರವಾದ ವೇಷಭೂಷಣ ಹೊತ್ತು ನರ್ತಿಸಿದ್ದರಿಂದಲೋ ಏನೋ, ಸೊಂಟದ ನೋವು ಕಾಣಿಸಿಕೊಂಡಾಗ ನೋವನ್ನು ಮರೆಯಲು ಮದ್ಯ ಸೇವನೆ ಆರಂಭಿಸಿದೆ. ಆದರೆ ನೋವನ್ನು ಮರೆಯುವ ಹಂತವನ್ನು ದಾಟಿ ಮದ್ಯದ ದಾಸನಾಗುತ್ತೇನೆ ಎಂದುಕೊಂಡಿರಲಿಲ್ಲ. ಇದು ಎಲ್ಲಿಯವರೆಗೆ ಹೋಯಿತೆಂದರೆ, ರಂಗದ ಮೇಲೆಯೇ ಒಮ್ಮೆ ಕುಸಿದು ಬಿದ್ದುಬಿಟ್ಟಿದ್ದೆ. ಪ್ರೇಕ್ಷಕರು ತಿರಸ್ಕರಿಸಿಯೇ ಬಿಟ್ಟಿದ್ದರೆನಿಸುತ್ತದೆ. ಮದ್ಯ ದಾಸನಿಗೆ ಅದನ್ನೆಲ್ಲ ಅರ್ಥ ಮಾಡಿಕೊಳ್ಳುವ ವ್ಯವಧಾನವೇ ಇರಲಿಲ್ಲ. ಹೀಗೆ ಒಮ್ಮೆ ಮಡದಿ ಚಂದ್ರಿಕಾಳೊಂದಿಗೆ ಜಗಳವಾಯಿತು. ಮದ್ಯದ ಅಮಲಿನಲ್ಲಿದ್ದುದರಿಂದ ಜಗಳವು ತಾರಕಕ್ಕೇರಿ ಆವೇಶದಿಂದ ಮನೆಯಲ್ಲಿ ಸಿಕ್ಕಿದ ಗುಳಿಗೆಗಳನ್ನೆಲ್ಲಾ ಬಾಯಿಗೆ ಹಾಕಿಕೊಂಡೆ. ದೀರ್ಘನಿದ್ದೆಗೆ ಜಾರಿದ್ದಷ್ಟೇ ಗೊತ್ತು. ನನ್ನ ಅವಸ್ಥೆಯ ಸುದ್ದಿ ತಿಳಿದ ನೆಚ್ಚಿನ ಗುರುವಾದ, ಕಲಾಮಂಡಲಂ ಪದ್ಮನಾಭನ್ ನಾಯರ್ ಬಂದು 'ಗೋಪೀ...' ಎಂದು ಕರೆದರು. ನಾನು ಕಣ್ಣು ತೆರೆದು ಗುರುವನ್ನು ನೋಡಿದೆ. ಒಡನೆ ಎದ್ದು ನಿಂತು ನಾನವರಿಗೆ ನಮಸ್ಕರಿಸಬೇಕಲ್ಲವೇ? ನನ್ನಿಂದ ಸಾಧ್ಯವೇ ಆಗುತ್ತಿರಲಿಲ್ಲ. ಎಷ್ಟು ಪ್ರಯತ್ನಪಟ್ಟರೂ ಕಾಲುಗಳು ಸಹಕಾರ ನೀಡದ ಕಾರಣ ಮುಗ್ಗರಿಸಿ ಬಿದ್ದುಬಿಟ್ಟೆ. ಆ ಸಂದರ್ಭದಲ್ಲಿ ಆಸ್ಪತ್ರೆಯಲ್ಲಿ ಬದುಕು ಸಾವಿನ ಮಧ್ಯೆ ಘೋರ ಯುದ್ಧವೇ ನಡೆಯಿತೆನಿಸುತ್ತದೆ. ಕೆಟ್ಟದಿನಗಳವು. ಹೆಚ್ಚೇನೂ ನೆನಪಿಲ್ಲ ನನಗೆ. ಗುರುವಾಯೂರಪ್ಪ ನನ್ನನ್ನು ಮತ್ತೊಮ್ಮೆ ಕಾಪಾಡಿದ ಎಂಬುದಷ್ಟೇ ನೆನಪಿದೆ. ಕಲಾವಿದರು ಮನಸ್ಸಿನ ನಿಯಂತ್ರಣವನ್ನು ಸಾಧಿಸಬೇಕು ಎಂದು ಹೇಳುವುದು ಸುಲಭ. ಪ್ರಾಯೋಗಿಕವಾಗಿ ಅದು ಸುಲಭದ ಮಾತಲ್ಲ. ಯಾಕೆಂದರೆ ಅವರ ಜೀವನ ಶೈಲಿಯು ಸೃಷ್ಟಿಸುವ ಸಂದರ್ಭಗಳು ಬೇರೆಬೇರೆ.

ನನ್ನ ಪಾಲಿಗೆ ಒಳ್ಳೆಯ ದಿನಗಳು ಬರಲೇ ಇಲ್ಲವೆಂದಲ್ಲ. ಕಥಕಳಿ ಕ್ಷೇತ್ರದ ದಿಗ್ಗಜರೊಂದಿಗೆ ನಾನು ವೇದಿಕೆಯಲ್ಲಿ ಪಾತ್ರಗಳನ್ನು ನಿರ್ವಹಿಸಿದ್ದೇನೆ. ಕೋಟ್ಟೈಕ್ಕಲ್ ಶಿವರಾಮನ್ (ದಮಯಂತಿ), ಕಲಾಮಂಡಲಂ ರಾಮನ್‌ಕುಟ್ಟಿ ನಾಯರ್, ಕಲಾಮಂಡಲಂ ಪದ್ಮನಾಭನ್ ನಾಯರ್, ಕಲಾಮಂಡಲಂ ಕೃಷ್ಣನ್ ನಾಯರ್, ಮಾರ್ಗಿ ವಿಜಯ ಕುಮಾರ್, ಮುಂತಾದವರೊಡನೆ ಪಾತ್ರ ಮಾಡುವ ಅವಕಾಶ ದೊರೆತಿದೆ.

ಮುಂಬಯಿಯಲ್ಲಿ ನಳಂದಾ ಕಾಲೇಜಿನಲ್ಲಿದ್ದಾಗ ಡಾ. ಕನಕ ರೆಲೆ ಅವರೊಡನೆ ಕೆಲಸ ಮಾಡಿರುವೆ. ಅವರು ನಿರ್ದೇಶಿಸಿದ ಡಾನ್ಸ್ ಡ್ರಾಮಾ ದಶಾವತಾರಂ, ಕಾಂಚನಮೃಗ, ರುಕ್ಮಿಣಿ ಸ್ವಯಂವರಮ್, ಸ್ವಪ್ನವಾಸವದತ್ತ (ಸಂಸ್ಕೃತ ನಾಟಕ) ಮುಂತಾದವುಗಳಲ್ಲಿ ಪಾತ್ರ ಮಾಡುವ ಅವಕಾಶ ಲಭ್ಯವಾಗಿದೆ. 'ನಾನು ಮಾಡಿದ್ದೇನೆ' ಎಂದು ಹೇಳುವುದೇ ದೊಡ್ಡ ತಪ್ಪು. ಕಲಾವಿದನಾದವನಿಗೆ ಯಾವತ್ತು 'ನಾನು' ಎಂಬ ಭಾವ ಬರುತ್ತದೋ, ಅಂದಿಗೆ ಕಲಾಮಾತೆಯ ಆಶೀರ್ವಾದ ಕೈತಪ್ಪಿಹೋಗುವುದು. ಅಹಂಭಾವವನ್ನು ಬಿಟ್ಟುಕೊಟ್ಟಷ್ಟೂ ಕಲೆಯು ನಮಗೆ ಒಲಿಯುತ್ತ ಹೋಗುತ್ತದೆ. 'ಅಹಂ' ಅನ್ನು ಬಿಡುವುದು ಮಾತಿನಲ್ಲಿ ಹೇಳಿದಷ್ಟು ಸುಲಭವಾದ ವಿಚಾರವಲ್ಲ. ಅದು ತುಳಿದಷ್ಟೂ ಹೆಡೆಯೆತ್ತಲು ಪ್ರಯತ್ನಿಸುತ್ತದೆ.